## ಮೂರನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಮೈಸೂರು.

**ಎಸ್.ಸಿ. ಸಂಖ್ಯೆ 246/2023**

| | | |
|---|---|---|
| ಸಾಕ್ಷಿದಾರರ ಹೆಸರು | : ಮಾದೇಶ್ | ಪಿಡಬ್ಲ್ಯೂ : 8 |
| ತಂದೆಯ / ಗಂಡನ ಹೆಸರು | : ಮಹದೇವಪ್ಪ | ಸಿಡಬ್ಲ್ಯೂ : 13 |
| ವಯಸ್ಸು | : 42 ವರ್ಷ | |
| ಉದ್ಯೋಗ | : ಖಾಸಗಿ ಕಂಪನಿಯಲ್ಲಿ ಕೆಲಸ | |
| ವಾಸಸ್ಥಳ | : ಮೈಸೂರು | |

**ಸಾಕ್ಷಿಯನ್ನು ಈ ದಿನ ದಿಃ 27.10.2025 ರಂದು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆ ಃ ಮಾನ್ಯ ಸರ್ಕಾರಿ ಅಭಿಯೋಜಕರಿಂದ**

1. ನಾನು ಮೇಲೆ ಹೇಳಿದ ವಿಳಾಸದಲ್ಲಿ ಹಲವು ವರ್ಷಗಳಿಂದ ವಾಸವಿರುತ್ತೇನೆ.

2. ನಾನು ದಾಖಲೆಗಳ ಮೇಲೆ ಸಹಿ ಹಾಕುತ್ತೇನೆ. ನನ್ನ ಸಹಿಯನ್ನು ನೋಡಿದರೆ ಗುರುತಿಸಬಲ್ಲೆ. ಸಾಕ್ಷಿಯೂ ತನ್ನ ಸಹಿ ಇರುವ ದಾಖಲೆಯನ್ನು ನೋಡಿ ಗುರುತಿಸಿದ್ದು, ಸದರಿ ದಾಖಲೆಯು ದಿ.20.12.2022 ರ ಅಮಾನತ್ತು ಮಹಜರ್ ಆಗಿದ್ದು, ಅದನ್ನು ನಿಪಿ.12 ಎಂದು, ಸಾಕ್ಷಿಯ ಸಹಿಯನ್ನು ನಿಪಿ.12(ಎ) ಎಂದು ಗುರುತಿಸಲಾಯಿತು. ಸದರಿ ದಾಖಲೆಗೆ ಸಹಿಯನ್ನು ನಾನು ದಿನಾಂಕ 22 ಡಿಸೆಂಬರ್ ನಲ್ಲಿ ಮಾಡಿರುತ್ತೇನೆ. ಸದರಿ ದಾಖಲೆಗೆ ನಾನು ಮಂಡಿ ಪೊಲೀಸ್ ಠಾಣೆ ಯಲ್ಲಿ ಸಹಿ ಮಾಡಿರುತ್ತೇನೆ. ನಾನು ನನ್ನ ವೈಯುಕ್ತಿಕ ಕೆಲಸಕ್ಕೆ ಮಂಡಿ ಪೊಲೀಸ್ ಠಾಣೆ ಗೆ ಹೋದಾಗ ಅಲ್ಲಿ ಒಬ್ಬ ಪೊಲೀಸರು ಬಟ್ಟೆ,

ವಾಚ್ ಮತ್ತು ರಕ್ತದ ಬಾಟಲಿಯನ್ನು ಇನ್ಸ್ ಪೆಕ್ಟರ್ ರವರಿಗೆ ನೀಡಿದ್ದು, ಆ ಸಮಯದಲ್ಲಿ ಮಹಜರ್ ಮಾಡುತ್ತೇವೆ ಎಂದು ಹೇಳಿ, ನಮ್ಮ ಸಹಿಗಳನ್ನು ಪಡೆದಿರುತ್ತಾರೆ. ಸದರಿ ವಸ್ತುಗಳನ್ನು ನಮಗೆ ತೋರಿಸಿ ನಂತರ ಅವುಗಳನ್ನು ಒಂದು ಹಸಿರು ಬಣ್ಣದ ಬಟ್ಟೆಯಲ್ಲಿ ಹಾಕಿಕೊಂಡರು.

3. ಅದೇ ಸಮಯದಲ್ಲಿ ಫೋಟೋಗಳನ್ನು ಸಹ ತೆಗೆದಿರುತ್ತಾರೆ. ಸಾಕ್ಷಿಗೆ ಫೋಟೋಗಳನ್ನು ತೋರಿಸಿ ಗುರುತಿಸಲು ಕೇಳಿದಾಗ ಸಾಕ್ಷಿಯೂ ಅದನ್ನು ನೋಡಿ ಗುರುತಿಸಿದ್ದು, ಸದರಿ ಫೊಟೋಗಳನ್ನು ನಿಪಿ.13 ಎಂದು ಗುರುತಿಸಲಾಯಿತು. ಸದರಿ ವಸ್ತುಗಳನ್ನು ನೋಡಿದರೆ ಗುರುತಿಸಬಲ್ಲೆ. ನ್ಯಾಯಾಲಯದ ಮುಂದೆ ಬಿಳಿ ಬಟ್ಟೆಯಲ್ಲಿ ಸುತ್ತಿ ಸುಸ್ಥಿತಿಯಲ್ಲಿದ್ದ ವಸ್ತುಗಳನ್ನು, ನ್ಯಾಯಾಲಯದ ಅನುಮತಿ ಮೇರೆಗೆ ತೆಗೆದು ನೋಡಲಾಗಿ ಅದರಲ್ಲಿ ಹಸಿರು ಬಣ್ಣದ ತುಂಬು ತೋಳಿನ ರಕ್ತದ ಕಲೆಯಾಗಿರುವ ಶರ್ಟ್ ಇದ್ದು, ಅದನ್ನು ನೋಡಿ ಸಾಕ್ಷಿ ಇರಬಹುದು ಎಂದು ನುಡಿಯುತ್ತಾರೆ. ಅದನ್ನು ಎಂಒ–7 ಎಂದು ಗುರುತಿಸಲಾಯಿತು. ಸಾಕ್ಷಿಯೂ ಕತ್ತರಿಸಿ ರಕ್ತದ ಕಲೆಯಾಗಿರುವ ಬನಿಯನ್ ನೋಡಿ ಗುರುತಿಸಿದ್ದು, ಅದನ್ನು ಎಂಒ–8 ಎಂದು ಗುರುತಿಸಲಾಯಿತು. ಸಾಕ್ಷಿಯೂ ಒಂದು **Sonata Wrist** ವಾಚ್ ನ್ನು ನೋಡಿ ಗುರುತಿಸಿದ್ದು, ಅದನ್ನು ಎಂಒ–9 ಎಂದು ಗುರುತಿಸಲಾಯಿತು. ಸಾಕ್ಷಿಯೂ ರಕ್ತದ ಮಾದರಿ ಇರುವ ಬಾಟಲಿಗಳನ್ನು ನೋಡಿ ಗುರುತಿಸಿದ್ದು, ಅವುಗಳನ್ನು ಎಂಒ–10 ಮತ್ತು 11 ಎಂದು ಗುರುತಿಸಲಾಯಿತು.

ಪಾಟೀ ಸವಾಲುಃ ಆರೋಪಿ ಪರ ವಕೀಲರಿಂದಃ

4. ನಾನು ಖಾಸಗಿ ಕಂಪನಿಯಲ್ಲಿ ಸರ್ವಿಸ್ ಕೆಲಸ ಮಾಡಿಕೊಂಡಿರುತ್ತೇನೆ. ನಾನು ಆಗಾಗ ಪೊಲೀಸ್ ಠಾಣೆ ಗೆ ಹೋಗುತ್ತೇನೆ ಎಂದರೆ ಸರಿಯಲ್ಲ. ನಮ್ಮ ಕಂಪನಿಯ ಹಣ ಬರುವುದು ಇದ್ದು, ಆ ವಿಚಾರಕ್ಕೆ ನಾನು ದೂರು ನೀಡಲು ಪೊಲೀಸ್ ಠಾಣೆಗೆ ಹೋಗಿರುತ್ತೇನೆ. ನನ್ನ ಜೊತೆ ನನ್ನ ಸಹೋದ್ಯೋಗಿ ಸಹ ಬಂದಿದ್ದರು. ನಾನು ಹೋಗುವಷ್ಟರಲ್ಲಿ ದಾಖಲೆಯನ್ನು ತಯಾರು ಮಾಡಿಟ್ಟಿರುತ್ತಾರೆ ಎಂದರೆ ಸಾಕ್ಷಿಯೂ ನಾವು ಹೋದಾಗ ವಸ್ತುಗಳನ್ನು ತೋರಿಸಿ ಅರ್ಧ ಗಂಟೆ ಕುಳಿತುಕೊಳ್ಳಲು ಹೇಳಿ ನಂತರ ವಿಷಯವನ್ನು ತಿಳಿಸಿ ಸಹಿ ಪಡೆದಿರುತ್ತಾರೆ ಎಂದು ನುಡಿಯುತ್ತಾರೆ. ಮಹಜರ್ ಜರುಗಿಸಿರುತ್ತಾರೆ ಎಂದು ಹೇಳಿದ್ದು, ಅದನ್ನು ಠಾಣೆಯ ಯಾವ ಅಂತಸ್ತಿನಲ್ಲಿ ಮಾಡಿರುತ್ತಾರೆ ಎಂದರೆ ಸಾಕ್ಷಿಯೂ ಮೊದಲನೆ ಮಹಡಿಯಲ್ಲಿ ಮಾಡಿರುತ್ತಾರೆ ಎಂದು ನುಡಿಯುತ್ತಾರೆ. ವಸ್ತುಗಳನ್ನು ತೋರಿಸಿದ್ದು, ಮತ್ತು ದಾಖಲೆಯನ್ನು ಮೊದಲನೆ ಮಹಡಿಯಲ್ಲಿ ಟೈಪ್ ಮಾಡಿರುತ್ತಾರೆ ಎಂದರೆ ಸಾಕ್ಷಿಯೂ ಟೈಪ್ ಮಾಡಿದ್ದು ಎಲ್ಲಿ ಎಂದು ನನಗೆ ಗೊತ್ತಿಲ್ಲ. ವಸ್ತುಗಳನ್ನು ಮೊದಲನೆ ಮಹಡಿಯಲ್ಲಿ ತೋರಿಸಿರುತ್ತಾರೆ ಎಂದು ನುಡಿಯುತ್ತಾರೆ. ಮೊದಲನೆ ಮಹಡಿಯಲ್ಲಿ ಇರುವ ಕೋಣೆಯ ಅಳತೆ ನನಗೆ ಹೇಳಲು ಬರುವುದಿಲ್ಲ. ಮೊದಲನೆ ಮಹಡಿಯಲ್ಲಿ ಇರುವ ಸ್ಥಳ ಕೋಣೆಗಿಂತ ದೊಡ್ಡದು ಇತ್ತು ಎಂದು ನುಡಿಯುತ್ತಾರೆ. ಮೊದಲನೆ ಮಹಡಿಯಲ್ಲಿ ಒಂದು ಬೀರು, ಪುಸ್ತಕಗಳು ಮತ್ತು ಇತರೆ ವಸ್ತುಗಳು ಇದ್ದವು ಎಂದು ನುಡಿಯುತ್ತಾರೆ. ಮಹಜರ್ ನ್ನು ನಾನು ಓದಿ ಸಹಿ ಮಾಡಿರುತ್ತೇನೆ. ಮಹಜರ್ ನಲ್ಲಿ ಮೊದಲನೆ ಮಹಡಿಯಲ್ಲಿ ಮಹಜರ್ ಜರುಗಿಸಲಾಗಿಯಿತು ಎಂದು ಬರೆದಿರುತ್ತದೆ ಎಂದರೆ ಸಾಕ್ಷಿಯೂ ಇಲ್ಲ ಎಂದು ನುಡಿಯುತ್ತಾರೆ. ನನಗೆ ಓದಲು ಮತ್ತ ಬರೆಯಲು ಬರುತ್ತದೆ. ಮಹಜರ್ ನಲ್ಲಿ ರೂಮಿನ

ಕೋಣೆಯ ಅಳತೆ ಮತ್ತು ಕೋಣೆಯಲ್ಲಿನ ವಿವರಗಳನ್ನು ಬರೆಯಲಾಗಿದೆಯೇ ಎಂದರೆ ಸಾಕ್ಷಿಯೂ ಇಲ್ಲ ಎಂದು ನುಡಿಯುತ್ತಾರೆ. ಅದರಲ್ಲಿ ಯಾರು ವಸ್ತುಗಳನ್ನು ಮತ್ತು ವಸ್ತುಗಳ ವಿವರಗಳನ್ನು ಬರೆಯಲಾಗಿರುತ್ತದೆ ಎಂದರೆ ಸಾಕ್ಷಿಯೂ ಇಲ್ಲ ಎಂದು ನುಡಿಯುತ್ತಾರೆ.

5. ನನ್ನ ಮುಂದೆ ಯಾವುದೇ ಮಹಜರ್ ನ್ನು ಜರುಗಿಸಿರುವುದಿಲ್ಲ. ಅಲ್ಲಿ ಯಾವುದೇ ವಸ್ತುಗಳನ್ನು ಅಮಾನತ್ತುಪಡಿಸಿಕೊಂಡಿರುವುದಿಲ್ಲ. ಬೇರೆ ದಿನ ತಯಾರಿಸಿದ ದಾಖಲೆಗೆ ಆ ದಿನ ನಾನು ಕೇವಲ ಸಹಿ ಮಾತ್ರ ಮಾಡಿರುತ್ತೇನೆ ಎಂದರೆ ಸರಿಯಲ್ಲ. ನನಗೆ ಮಹಜರ್ ಗೆ ಬರುವಂತೆ ಯಾವುದೇ ಲಿಖಿತ ನೋಟಿಸ್ ನೀಡಿರುವುದಿಲ್ಲ ಎಂದರೆ ಸರಿ. ನನ್ನ ಸಮಕ್ಷಮ ಯಾವುದೇ ವಸ್ತುಗಳನ್ನು ಅಮಾನತ್ತುಪಡಿಸಿಕೊಂಡಿರುವುದಿಲ್ಲ, ಮತ್ತು ಮಹಜರ್ ನ್ನು ಜರುಗಿಸಿರುವುದಿಲ್ಲ. ನನಗೆ ಯಾವುದೋ ದುಡ್ಡಿನ ಪ್ರಕರಣ ಇದ್ದು ಪೊಲೀಸರಿಂದ ನನಗೆ ಸಹಾಯವಾಗಬೇಕಾಗಿದ್ದರಿಂದ, ಪೊಲೀಸರ ಹೇಳಿಕೆಯ ಮೇರೆಗೆ ಅವರಿಗೆ ಸಹಾಯವಾಗಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಪೋಟೊಗಳನ್ನು ಸಹ ಬೇರೆ ದಿನ ನಿಲ್ಲಿಸಿ ತೆಗೆದಿದ್ದು, ಸದರಿ ಪೋಟೋಗಳನ್ನು ಸೃಷ್ಟಿ ಮಾಡಲಾಗಿರುತ್ತದೆ ಎಂದರೆ ಸರಿಯಲ್ಲ.

<u>ಮರು ವಿಚಾರಣೆ : ಇಲ್ಲ</u>

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಸಾಕ್ಷಿಯ ಹೇಳಿಕೆಯನ್ನು ಬೆರಳಚ್ಚು ಮಾಡಿಸಲಾಯಿತು)**

ಓ ಹೇ ಕೇ ಸ ಇ ಎ ಒ

3ನೇ ಹೆಚ್ಚುವರಿ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಧೀಶರು
ಮೈಸೂರು.